		216	ದೇವದುರ್ಗ	5
		217	ಮಾನ್ವಿ	2
		218	ಸಿಂಧನೂರು	1
		219	ಮಸ್ಕಿ	2
29	ಕೊಪ್ಪಳ	220	ಗಂಗಾವತಿ	2
		221	ಕನಕಗಿರಿ	1
		222	ಕುಷ್ಟಗಿ	2
		223	ಯಲಬುರ್ಗಾ	5
		224	ಕೊಪ್ಪಳ	2
			ಒಟ್ಟು	385

<u>ಕರ್ನಾಟಕ ವಿಧಾನ ಸಭೆ</u>

368 ಶ್ರೀ.ಸಿದ್ದು ಸವದಿ (ತೇರದಾಳ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು.

ಅ) ಪಿ.ಹೆಚ್.ಸಿ. ಮತ್ತು ಸಿ.ಹೆಚ್.ಸಿ ಆಸ್ಪತ್ರೆಗಳನ್ನು ಮೇಲ್ದರ್ಜೆಗೇರಿಸಲು ಇರುವ ನಿಯಾಮವಳಿಗಳೇನು?

ಕೇಂದ್ರ ಸರ್ಕಾರದ ಮಾರ್ಗಸೂಚಿಗಳ ಪ್ರಕಾರ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಸ್ಥಾಪಿಸಲು ಬಯಲು ಪ್ರದೇಶಗಳಲ್ಲಿ 30 ಸಾವಿರ ಜನಸಂಖ್ಯೆಗೆ ಒಂದರಂತೆ ಹಾಗೂ ಗುಡ್ಡಗಾಡು ಮತ್ತು ಬುಡಕಟ್ಟು ಪ್ರದೇಶಗಳಲ್ಲಿ 20 ಸಾವಿರ ಜನಸಂಖ್ಯೆಗೆ ಒಂದರಂತೆ ಸ್ಥಾಪಿಸಲು ಅವಕಾಶವಿದೆ. ಹಾಗೆಯೇ ಬಯಲು ಪ್ರದೇಶಗಳಲ್ಲಿ 1.20.000 ಜನಸಂಖ್ಯೆಗೆ ಒಂದರಂತೆ ಹಾಗೂ ಗುಡ್ಡಗಾಡು ಮತ್ತು ಬುಡಕಟ್ಟು ಪ್ರದೇಶಗಳಲ್ಲಿ 80 ಸಾವಿರ ಜನಸಂಖ್ಯೆಗೆ ಒಂದರಂತೆ ಸಮುದಾಯ ಆರೋಗ್ಯ ಕೇಂದ್ರವನ್ನು ಸ್ಥಾಪಿಸಲು ಅವಕಾಶವಿದೆ.

ಆ) 2006–07ರಿಂದ ಇಲ್ಲಿಯವರೆಗೆ ಮೇಲ್ದರ್ಜೆಗೇರಿಸಲಾದ ಆಸ್ಪತ್ರೆಗಳ ಸಂಖ್ಯೆ ಎಷ್ಟು (ಕ್ಷೇತ್ರವಾರು ಮಾಹಿತಿ ಒದಗಿಸುವುದು)?

2006–07 ರಲ್ಲಿ 65 ತಾಲ್ಲೂಕು ಮಟ್ಟದ ಆಸ್ಪತ್ರೆಯನ್ನು 100 ಹಾಸಿಗೆಗಳ ಆಸ್ಪತ್ರೆಯನ್ನಾಗಿ ಮೇಲ್ದರ್ಜೆಗೇರಿಸಲಾಗಿದೆ. 2007–08 ರಲ್ಲಿ 516 ಪ್ರಾಥಮಿಕ ಆರೋಗ್ಯ ಘಟಕಗಳನ್ನು ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನಾಗಿ ಮೇಲ್ದರ್ಜೆಗೇರಿಸಲಾಗಿದೆ ಮತ್ತು 26 ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಸಮುದಾಯ ಆರೋಗ್ಯ ಕೇಂದ್ರಗಳನ್ನಾಗಿ ಮೇಲ್ದರ್ಜೆಗೇರಿಸಲಾಗಿದೆ.

ಇ) ತೇರದಾಳ ಮತ ಕ್ಷೇತ್ರದ ತೇರದಾಳ ಪಿ.ಹೆಚ್.ಸಿ. ಮಹಾಲಿಂಗಪೂರ ಮತ್ತು ಬನಹಟ್ಟಿಯಲ್ಲಿರುವ ಸಿ.ಹೆಚ್.ಸಿ.ಗಳನ್ನು ಮೇಲ್ದರ್ಜೆಗೇರಿಸಲು ಕೈಗೊಂಡಿರುವ ಕ್ರಮವೇನು?

ಅಂತಹ ಪ್ರಸ್ತಾವನೆ ಸರ್ಕಾರದ ಮುಂದಿರುವುದಿಲ್ಲ.

ಈ) ಈ ಕ್ಷೇತ್ರದ ದೊಡ್ಡ ಗ್ರಾಮಗಳಲ್ಲಿ ಪಿ.ಹೆಚ್.ಸಿ ಗಳನ್ನು ಪ್ರಾರಂಭಿಸುವ ಬೇಡಿಕೆ ಇದ್ದು, ಈ ಬಗ್ಗೆ ಕೈಗೊಳ್ಳಲಿರುವ ಕ್ರಮವೇನು?

ಮಾರ್ಗಸೂಚಿಗಳನ್ವಯ ರಾಜ್ಯದಲ್ಲಿ ಈಗಾಗಲೇ ನಿಗಧಿತ ಸಂಖ್ಯೆಗಿಂತ ಹೆಚ್ಚು ಪ್ರಾಥಮಿಕ ಆರೋಗ್ಯ ಕೇಂದ್ರಗಳು ಕಾರ್ಯ ನಿರ್ವಹಿಸುತ್ತಿವೆ. ಆದುದರಿಂದ ಹೊಸ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಪ್ರಾರಂಭಿಸುವ ಪ್ರಸ್ತಾವನೆ ಸರ್ಕಾರದ ಮುಂದಿರುವುದಿಲ್ಲ.

ಸಂಖ್ಯೆ:ಆಕುಕ 133 ಸಿಜಿಎಂ 2009

(ಬಿ. ಶ್ರೀರಾಮುಲು)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು.

<u>ವಿಧಾನ ಸಭೆ</u>

370 ಶ್ರೀ ಹೆಚ್.ಡಿ. ರೇವಣ್ಣ
ಸಮಾಜ ಕಲ್ಯಾಣ ಸಚಿವರು.

ಅ) ಹಾಸನ ಜಿಲ್ಲೆಯಲ್ಲಿರುವ ಮೊರಾರ್ಜಿ ದೇಸಾಯಿ ಶಾಲೆಗಳೆಷ್ಟು? ಈ ಶಾಲೆಗಳಲ್ಲಿರುವ ಅಲ್ಪಸಂಖ್ಯಾತರು, ಹಿಂದುಳಿದವರು ಹಾಗೂ ಪರಿಶಿಷ್ಟ ಜಾತಿ ಮತ್ತು ಪಂಗಡದ ಮಕ್ಕಳ ಸಂಖ್ಯೆ ಎಷ್ಟು;

ಹಾಸನ ಜಿಲ್ಲೆಯಲ್ಲಿ ಒಟ್ಟು 21 ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಿದ್ದು ಅವುಗಳಲ್ಲಿನ ವಿದ್ಯಾರ್ಥಿಗಳ ವಿವರ ಈ ಕೆಳಕಂಡಂತಿದೆ.

2008-09ನೇ ಸಾಲಿನಲ್ಲಿ ವಿದ್ಯಾರ್ಥಿಗಳ ದಾಖಲಾತಿ ವಿವರ.							
ವಸತಿ ಶಾಲೆಯ ವರ್ಗ	ವಸತಿ ಶಾಲೆಗಳ ಸಂಖ್ಯೆ	ಪ. ಜಾತಿ	ಪ. ವರ್ಗ	ಹಿಂ. ವರ್ಗ	ಅಲ್ಪ ಸಂ.	ಸಾಮಾನ್ಯ	ಒಟ್ಟು
ಪ.ಜಾತಿ	5	363	7	–	–	260	630
ಶಿಕ್ಷಣ	1	145	2	–	–	51	198

9-104